


ಕಥೆ ಮತ್ತು ಚಿತ್ರ :
ಪಿ. ಪುರುಷೋತ್ತಮ ಕಾರಂತ, ಮಂಗಳೂರು

ದೊಡ್ಡ ನಗರವೊಂದರಲ್ಲಿ ಒಬ್ಬ ಭಿಕ್ಷುಕ ಸತ್ತನಂತೆ. ಆತ ದೊಡ್ಡ ಭಿಕ್ಷುಕನೇ ಆಗಿದ್ದ. ಅಂದರೆ ತಾನು ಚಕ್ರವರ್ತಿಯಾಗುವ ಕನಸು ಕಾಣುತ್ತಲೇ ನಲವತ್ತು ವರ್ಷಗಳ ಕಾಲ ಒಂದೇ ಕಡೆ ಇದ್ದು ಭಿಕ್ಷೆಯೆತ್ತುತ್ತಿದ್ದ. ಆದರೂ ಅವನು ಚಕ್ರವರ್ತಿಯಾಗಲೇ ಇಲ್ಲ! ಅವನು ಸತ್ತನಂತರ ಹತ್ತು ಜನ ಸೇರಿ ಶವಸಂಸ್ಕಾರ ಮಾಡಿದರು. ಅವನು ನಲವತ್ತು ವರುಷ ಕುಳಿತು ಬೇಡಿದ ಜಾಗವನ್ನು ಶುಭ್ರಗೊಳಿಸಲು ಹೊರಟರು. ಆ ಜಾಗದಲ್ಲಿದ್ದ ಅವನ ಪದಾರ್ಥಗಳನ್ನೆಲ್ಲ ತೆಗೆದಾಗ ಅಲ್ಲೊಂದು ದೊಡ್ಡ ಕಲ್ಲಿನ ಚಪ್ಪಡಿಯಿತ್ತು. ಅದನ್ನು ತೆಗೆಯಲು ತೀರ್ಮಾನಿಸಿ ಸ್ವಲ್ಪ ಆಳಕ್ಕೆ ಅಗೆಯಲು ಆರಂಭಿಸಿದರು. ಹಾಗೆ ಅಗೆಯುವಾಗ ಅಲ್ಲಿ ಅಪಾರವಾದ ನಿಧಿ ಸಿಕ್ಕಿತು. ಜನರಿಗೆಲ್ಲ ಆಶ್ಚರ್ಯವೂ, ಅವನ ಮೇಲೆ ಕನಿಕರವೂ ಉಂಟಾಯಿತು. ನಲವತ್ತು ವರ್ಷಗಳ ಕಾಲ ಅದರ ಮೇಲೇ ಕುಳಿತು, ಭಿಕ್ಷುಕನಾಗಿಯೇ ಸತ್ತನಲ್ಲ, ಚಕ್ರವರ್ತಿಯಾಗಲಿಲ್ಲವಲ್ಲ ಎನ್ನುತ್ತಿದ್ದರು. ಆಗ ಒಬ್ಬ ವೃದ್ಧ ಆ ಕಡೆ ಬಂದು "ನಿಮಗೆಲ್ಲ ಯಾರ ಬಗ್ಗೆ ಕನಿಕರ? ನಾವೆಲ್ಲರೂ ಹೀಗೇ. ಹೊರಗೆಲ್ಲ ಯಾಚಿಸುತ್ತ ಅಲೆದಾಡುತ್ತೇವೆ. ನಮ್ಮೊಳಗಿರುವ ಸಾಮರ್ಥ್ಯಗಳ ಬಗ್ಗೆ ನಮಗೇ ಅರಿವಿಲ್ಲ. ಅವುಗಳನ್ನು ಬೆಳೆಸುವ ಹಂಬಲವೂ ಇಲ್ಲ. ಕೇವಲ ಕನಸು ಕಾಣುತ್ತೇವೆ, ಇತರರ ಸಾಮರ್ಥ್ಯಗಳನ್ನು ಕಂಡು ಅಸೂಯೆ ಪಡುತ್ತೇವೆ! ಆದರೆ ನಮ್ಮೊಳಗಿನ ನಿಧಿಯನ್ನು ಹುಡುಕುವುದೇ ಇಲ್ಲ..." ಎಂದು ನಿಟ್ಟುಸಿರು ಬಿಟ್ಟನು.

